ಮಂತ್ರಾಲಯದಿಂದ ಈ ಭಾಗದಲ್ಲಿನ ಸದರಿ ರಸ್ತೆಯನ್ನು ಆರು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವು ಅನುಮೋದನೆಯ ಅಂತಿಮ ಹಂತದಲ್ಲಿರುತ್ತದೆ.

ಉ) ಈ ರಸ್ತೆಯಲ್ಲಿ ಸಂಚರಿಸುವ ಅದಿರಿನ ವಾಹನಗಳಿಗೆ ಹಾಗೂ ಭಾರೀ ವಾಹನಗಳ ಸಂಚಾರಕ್ಕೆ ಪರ್ಯಾಯ ರಸ್ತೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದೇ;

ಈಗಾಗಲೇ ಸದರಿ ರಸ್ತೆಯನ್ನು ಆರು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವು ಅನುಮೋದನೆಯ ಅಂತಿಮ ಹಂತದಲ್ಲಿರುವುದರಿಂದ ಪ್ರತ್ಯೇಕ ರಸ್ತೆ ಅಗತ್ಯವಿರುವುದಿಲ್ಲ.

ಊ) ಹಾಗಿದ್ದಲ್ಲಿ, ಎಂದಿನಿಂದ ಪರ್ಯಾಯ ವ್ಯವಸ್ಥೆಯನ್ನು ತರಲಾಗುವುದು?

ಉದ್ಭವಿಸುವುದಿಲ್ಲ.

ಸಂಚಾರಿ ಪೊಲೀಸ್ ಠಾಣೆ

60 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಡಾ॥ ವಿ.ಎಸ್.ಆಚಾರ್ಯ ಮಾನ್ಯ ಗೃಹ ಸಚಿವರು

ಅ) ಕೊಪ್ಪಳ ನಗರದಲ್ಲಿ ಸಂಚಾರಿ ಪೊಲೀಸ್ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಆ) ಹಾಗಿದ್ದಲ್ಲಿ, ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಇ) ಸಂಚಾರಿ ಆರಕ್ಷಕ ಠಾಣೆಯನ್ನು ನಿರ್ಮಿಸಲು ಸ್ಥಳ ಗುರುತಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಈ ಸ್ಥಳದಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು? ಈ ಕಾಮಗಾರಿಗೆ ಬಿಡುಗಡೆ ಮಾಡಲಾಗುವ ಅನುದಾನದ ಮೊತ್ತವೆಷ್ಟು?

ಊ) ಕೊಪ್ಪಳ ನಗರವು ಜಿಲ್ಲಾ ಕೇಂದ್ರ ಸ್ಥಾನವಾಗಿರುವುದರಿಂದ ನಗರವು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ, ಇದುವರೆವಿಗೂ ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ/130/ ಪಿಒಪಿ/08, ದಿನಾಂಕ:23–7–2008 ರಲ್ಲಿ ಕೊಪ್ಪಳ ನಗರ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ ಪೂರ್ಣ ವಿವರಗಳನ್ನೊಳಗೊಂಡ ಪ್ರಸ್ತಾವನೆ ಕಳುಹಿಸಲು ನಿರ್ದೇಶಿಸಿತ್ತು, ಅದರಂತೆ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ರಾಷ್ಟ್ರೀಯ ಪೊಲೀಸ್ ಆಯೋಗದ 7ನೇ ವರದಿಯಂತೆ ಹೊಸದಾಗಿ ಸಂಚಾರ ಪೊಲೀಸ್ ಠಾಣೆಯನ್ನು ತೆರೆಯಲು ವಾರ್ಷಿಕ ಸಂಚಾರ ಅಪಘಾತ ಪ್ರಕರಣಗಳ ಸಂಖ್ಯೆಯನ್ನು ಪರಿಗಣಿಸಬೇಕಾಗಿರುತ್ತದೆ.

ಕೊಪ್ಪಳ ನಗರದಲ್ಲಿ ಸಂಚಾರ ಪೊಲೀಸ್ ಠಾಣೆಯನ್ನು ತೆರೆಯಲು ಅವಶ್ಯವಿರುವ ಭಾರೀ ಸಂಚಾರ ದಟ್ಟಣೆ ಇರುವುದಿಲ್ಲ. ಅಲ್ಲದೆ, ಈ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗವು ನಿಗಧಿಪಡಿಸಿರುವ ಮಾನದಂಡಗಳಿಗೆ ಒಳಪಡದ ಕಾರಣ ಸದ್ಯಕ್ಕೆ ಈ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.

ಮಠಾಧೀಶರುಗಳಿಗೆ ಪೊಲೀಸ್ ರಕ್ಷಣೆ

62 ಶ್ರೀ ಬಸವರಾಜನ್ ಎಸ್.ಕೆ. (ಚಿತ್ರದುರ್ಗ)

ಡಾ. ವಿ.ಎಸ್.ಆಚಾರ್ಯ ಗೃಹ ಸಚಿವರು

ಅ) ರಾಜ್ಯದಲ್ಲಿರುವ ಎಷ್ಟು ಮಠಾಧೀಶರುಗಳಿಗೆ ಪೊಲೀಸ್ ರಕ್ಷಣೆ ನೀಡಲಾಗಿದೆ (ಮಠಗಳಾವಾರು ವಿವರಗಳನ್ನು ನೀಡುವುದು)

ರಾಜ್ಯದಲ್ಲಿನ 11 ಮಠಾಧೀಶರಿಗೆ ಪೊಲೀಸ್ ರಕ್ಷಣೆ ನೀಡಲಾಗಿದೆ. ಮಠಗಳವಾರು ವಿವರಗಳನ್ನು ಅನುಬಂಧ 'ಎ' ದಲ್ಲಿ ನೀಡಲಾಗಿದೆ.

ಆ) ಸರ್ವಸಂಘ ಪರಿತ್ಯಾಗಿಗಳಾದ ಯಾವ ಯಾವ ಮಠಾಧೀಶರುಗಳಿಗೆ ಯಾರಿಂದ ಜೀವ ಬೆದರಿಕೆ ಇದೆ; ಹಾಗೂ ರಕ್ಷಣೆ ಒದಗಿಸಲು ಕಾರಣಗಳೇನು;

ಭದ್ರತೆ ಒದಗಿಸಿರುವ ಮಠಾಧೀಶರುಗಳಿಗೆ ಅವರವರಿಗೆ ಇರುವ ಬೆದರಿಕೆಯ ಸ್ವರೂಪ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಭದ್ರತೆಯನ್ನು ಒದಗಿಸಲಾಗಿದೆ.

ಇ) ಮಠಾಧೀಶರುಗಳಿಗೆ ಮತ್ತು ಖಾಸಗಿ ವ್ಯಕ್ತಿಗಳಿಗೆ ಪೊಲೀಸ್ ರಕ್ಷಣೆ ನೀಡುವುದರಿಂದ ಪ್ರತಿ ವರ್ಷ ಸರ್ಕಾರಕ್ಕೆ ತಗಲುತ್ತಿರುವ ವೆಚ್ಚವೆಷ್ಟು (ಸಂಪೂರ್ಣ ವಿವರಗಳನ್ನು ನೀಡುವುದು);

ಅನುಬಂಧದಲ್ಲಿ ತೋರಿಸಿರುವ 11 ಮಠಾಧೀಶರಿಗೆ ಅವರಿಗೆ ಇರುವ ಬೆದರಿಕೆಯ ಆಧಾರದ ಮೇರೆಗೆ ಸರ್ಕಾರದಿಂದ ಭದ್ರತೆಯನ್ನು ಒದಗಿಸಲಾಗಿದ್ದು, ಇದಕ್ಕೆ ತಗಲುವ ವಾರ್ಷಿಕ ವೆಚ್ಚ ರೂ. 54,67,676–00ಗಳಾಗಿರುತ್ತವೆ. ಈ ಹಣವನ್ನು ಸರ್ಕಾರವೇ ಭರಿಸುತ್ತಿದೆ.

ರಾಜ್ಯದಲ್ಲಿ ಕೆಲವು ಖಾಸಗಿ ವ್ಯಕ್ತಿಗಳಿಗೆ ಅವರ ಕೋರಿಕೆ ಮತ್ತು ಅವರಿಗಿರುವ ಬೆದರಿಕೆಯ ಆಧಾರದ ಮೇರೆಗೆ ಭದ್ರತೆಯನ್ನು ಸ್ಥಳೀಯ ಪೊಲೀಸರು ಒದಗಿಸಿದ್ದು, ಇದಕ್ಕೆ ತಗಲುವ ವಾರ್ಷಿಕ ವೆಚ್ಚ ರೂ. 26,42,623–00 ಗಳಾಗಿದ್ದು, ಇದನ್ನು ಭದ್ರತೆ ಪಡೆದಿರುವ ವ್ಯಕ್ತಿಗಳೇ ಸರ್ಕಾರಕ್ಕೆ ಭರಿಸುತ್ತಿದ್ದಾರೆ.

ಈ) ಪೊಲೀಸ್ ರಕ್ಷಣೆ ಪಡೆದಿರುವ ಮಠಾಧೀಶರುಗಳು ಹಾಗೂ ಖಾಸಗಿ ವ್ಯಕ್ತಿಗಳು ಸರ್ಕಾರಕ್ಕೆ ಹಣ ಪಾವತಿಸುತ್ತಿದ್ದಾರೆಯೇ;